





# ಫೆರಾರಿ ಥೀಮ್ ಪಾರ್ಕ್

ಚಿತ್ರ ನೋಡುವಾಗ ಇದೇನೋ ವಿಚಿತ್ರ ಚಿಟ್ಟೆಯ ರೂಪದ ಕ್ರೀಡಾಂಗಣದಂತೆ ಭಾಸವಾಗುತ್ತದೆ ಅಲ್ಲವೇ? ಇದು ಅಬುಧಾಬಿಯಲ್ಲಿರುವ ಫೆರಾರಿ ಥೀಮ್ ಪಾರ್ಕ್. ಜಗತ್ತಿನಲ್ಲೇ ಅತೀ ದೊಡ್ಡ ಒಳಾಂಗಣ ಥೀಮ್ ಪಾರ್ಕ್ ಎಂಬ ಖ್ಯಾತಿ ಇದಕ್ಕಿದೆ. ಹಾಗೆಯೇ ಅತ್ಯಂತ ವೇಗದ ಮತ್ತು ಬೃಹತ್ ರೋಲರ್ ಕ್ಯಾಸ್ಟರ್ ಹೊಂದಿರುವ ಪಾರ್ಕ್ ಕೂಡಾ ಹೌದು.

ಫೆರಾರಿ ಕಾರ್ ತಯಾರಿಕಾ ಕಂಪೆನಿಯು ಇದನ್ನು ನಿರ್ಮಿಸಿದ್ದು, ಅಬುಧಾಬಿಗೆ ಪ್ರವಾಸ ಹೋಗುವವರ ನೆಚ್ಚಿನ ತಾಣ. ಇಲ್ಲಿ ಫೆರಾರಿಯ ಹಳೆಯ ಮತ್ತು ಹೊಸ ಮಾದರಿ ಕಾರುಗಳ ಸಂಗ್ರಹಾಲಯ ಇದ್ದು, ವೀಕ್ಷಣೆಗೆ ತೆರೆದಿರುತ್ತದೆ. ಮಕ್ಕಳಿಗೆ ಮತ್ತು ವಯಸ್ಕರಿಗೆ ಸುಮಾರು 20ಕ್ಕೂ ಅಧಿಕ ಮಾದರಿಯ ಸಾಹಸಿ ಕ್ರೀಡೆಗಳು ಇಲ್ಲಿವೆ.

ಫೆರಾರಿ ಕಂಪೆನಿಯ ಇತಿಹಾಸ, ಭವಿಷ್ಯದ ಕಾರುಗಳ ತಂತ್ರಜ್ಞಾನಗಳ ಕುರಿತಾದ ಡಿಜಿಟಲ್ ಮತ್ತು 3ಡಿ ಪ್ರದರ್ಶನಗಳು ಇಲ್ಲಿ ನಡೆಯುತ್ತಿರುತ್ತವೆ. ಶಾಪಿಂಗ್ ಇಷ್ಟಪಡುವವರಿಗೆ ಇಲ್ಲಿ ಫೆರಾರಿ ಬ್ರಾಂಡ್‌ನ ಉತ್ಪನ್ನಗಳ ಮಳಿಗೆಯಲ್ಲಿ ಪ್ರದರ್ಶನ ಮತ್ತು ಮಾರಾಟ ವ್ಯವಸ್ಥೆ ಇದೆ. ಹಾಗಾಗಿ ಎಲ್ಲವೂ ಫೆರಾರಿಮಯ.

ಇದು ಒಟ್ಟಾರೆ 86,000 ಚದರ ಮೀಟರ್ ಜಾಗದಲ್ಲಿ ವ್ಯಾಪಿಸಿದ್ದು, ಒಂದು ದಿನವಿಡೀ ನೋಡುವಷ್ಟು ಇದೆ. ಮಕ್ಕಳಿಗೆ ಜೂನಿಯರ್ ಗ್ರಾನ್ ಪ್ರೀ ಇದ್ದು, ವಯಸ್ಕರಿಗೆ ಪ್ರತ್ಯೇಕ ರೇಸಿಂಗ್ ಟ್ರ್ಯಾಕ್ ಇದೆ. ಹಾಗಾಗಿ ಇಲ್ಲಿ ಕಾರು ರೇಸ್‌ನ ಮಜಾವನ್ನೂ ಅನುಭವಿಸಬಹುದು. ಪ್ರವಾಸಿಗರಿಗೆ ಇಲ್ಲಿನ ಪ್ರವೇಶ ಶುಲ್ಕ 127 ಡಾಲರ್. ಅಂದರೆ ಸುಮಾರು 7620 ರೂಪಾಯಿ! ಇಷ್ಟಾಗಿಯೂ ಫೆರಾರಿಯನ್ನು ನೀವು ಇಷ್ಟಪಡುವವರಾದರೆ ಈ ಪಾರ್ಕ್‌ಗೆ ಒಮ್ಮೆ ಭೇಟಿ ನೀಡಬಹುದು.

■ ಕಿರಣ್ ಇಜಿಮಾನ್